ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

E-Mail: prydirector.edu.sgkar@nic.in

ಸಂಖ್ಯೆ : ಸಿ7(8)ಪ್ರಾಶಿಅ/ಆರ್.ಟಿ.ಇ/ಶುಲ್ಕ ಮರುಪಾವತಿ/2018-19 ದಿನಾಂಕ: 09-11-2018

## : : ಸುತ್ತೋಲೆ : :

ವಿಷಯ: ಶಿಕ್ಷಣ ಹಕ್ಕು ಕಾಯಿದೆಯಡಿ 2018-19 ನೇ ಸಾಲಿನಲ್ಲಿ ಶುಲ್ಕ ಮರುಪಾವತಿಗಾಗಿ ತಂತ್ರಾಂಶದಲ್ಲಿ ಶಾಲಾ ಹಂತದಲ್ಲಿ ಅನುಸರಿಸಬೇಕಾದ ಕ್ರಮಗಳು.

*****

2018-19 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ ಶುಲ್ಕಮರುಪಾವತಿ ತಂತ್ರಾಂಶವನ್ನು ದಿನಾಂಕ:09.11.2018 ರಂದು ಇಲಾಖಾ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

2018-19 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ ಶುಲ್ಕಮರುಪಾವತಿಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಆರ್.ಟಿ.ಇ. ಶಾಲಾ ಮುಖ್ಯಸ್ಥರು, ಈ ಕೆಳಕಾಣಿಸಿದಂತೆ ಸಕಾಲಿಕ ಕ್ರಮ ಕೈಗೊಳ್ಳಲು ತಿಳಿಸಿದೆ.

- 2018-19 ನೇ ಸಾಲಿಗೆ ಆರ್.ಟಿ.ಇ ಪ್ರವೇಶ ತಂತ್ರಾಂಶದ ಮೂಲಕ ದಾಖಲಾದ ಮಕ್ಕಳ ಮಾಹಿತಿಯನ್ನು ಸಂಪೂರ್ಣವಾಗಿ, SATS software Freeze ಮಾಡಿದ ನಂತರವೇ 2018-19 ನೇ ಸಾಲಿನ ಆರ್.ಟಿ.ಇ ಶುಲ್ಕ ಮರುಪಾವತಿ ತಂತ್ರಾಂಶದಲ್ಲಿ ನಿಮ್ಮ ಶಾಲೆಯ ಮಾಹಿತಿಯನ್ನು ಅಳವಡಿಸಲು ಸಾಧ್ಯವಾಗುತ್ತದೆ.
- 2016-17, 2017-18 ಸಾಲುಗಳಲ್ಲಿ ಅಪೀಲ್ ತಂತ್ರಾಂಶದಲ್ಲಿ ಯಾವುದೇ ವರ್ಷ ಬಾಕಿ ಉಳಿದ ಆರ್.ಟಿ.ಇ ಶುಲ್ಕ ಮರುಪಾವತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಶಾಲೆಯವರು, ಸದರಿ ಸಾಲಿನ ಪ್ರಕರಣಗಳು ಇತ್ಯರ್ಥವಾದ ನಂತರವೇ 2018-19 ನೇ ಸಾಲಿನ ಆರ್.ಟಿ.ಇ ಶುಲ್ಕ ಮರುಪಾವತಿ ತಂತ್ರಾಂಶದಲ್ಲಿ ಅಳವಡಿಸಲು ಸಾಧ್ಯವಾಗುತ್ತದೆ.
- ಆರ್.ಟಿ.ಇ ಶುಲ್ಕ ಮರುಪಾವತಿ ತಂತ್ರಾಂಶವು ಶಿಕ್ಷಣ ಇಲಾಖೆಯ ವೆಬ್‌ಸೈಟ್ www.schooleducation.kar.nic.in ರಡಿಯಲ್ಲಿ ಐ.ಪಿ. ವಿಳಾಸ **http://164.100.133.134/RTE1819/** ರಲ್ಲಿ ಲಿಂಕ್ ನೀಡಲಾಗಿದೆ. ಆರ್.ಟಿ.ಇ ಶುಲ್ಕ ಮರುಪಾವತಿ ತಂತ್ರಾಂಶದಲ್ಲಿ ಮಾಹಿತಿಗಳನ್ನು ಅಳವಡಿಸಲು ಅನುವಾಗುವಂತೆ **Video Tutorial** ಅಳವಡಿಸಲಾಗಿದೆ.
- ಶಾಲಾ ಮುಖ್ಯಸ್ಥರು 2018-19 ನೇ ಸಾಲಿಗೆ ತಮ್ಮ ಶಾಲಾ ಡೈಸ್ ಕೋಡ್ ಹಾಗೂ ಎಸ್.ಎಂ.ಎಸ್ ಮೂಲಕ ಈಗಾಗಲೇ ರವಾನಿಸಿರುವ ಡಿಫಾಲ್ಟ್ ಪಾಸ್‌ವರ್ಡ್ ಬಳಸಿ ಲಾಗಿನ್ ಆಗುವುದು.
- ಲಾಗಿನ್ ಆದ ಕೂಡಲೇ ಪಾಸ್‌ವರ್ಡ್ ಬದಲಾಯಿಸಲು ನೀಡಿರುವ ಅವಕಾಶ ಬಳಸಿಕೊಂಡು, ಕಡ್ಡಾಯವಾಗಿ ಪಾಸ್‌ವರ್ಡ್ ಬದಲಾಯಿಸಿ ಸಂರಕ್ಷಿಸಿಕೊಳ್ಳತಕ್ಕದ್ದು.
- ಸಂರಕ್ಷಿಸಿದ ಪಾಸ್‌ವರ್ಡ್ ಬಳಸಿಕೊಂಡು New Application Click ಮಾಡುವುದು.
- ಅಧಿಕಾರ ನೀಡಿದವರ Authorizee ಅಥವಾ ಪಡೆದವರ Authorizer ಬದಲಾವಣೆ ಅಗತ್ಯವಿದ್ದಲ್ಲಿ ತಂತ್ರಾಂಶದಲ್ಲಿ ನೀಡಿರುವ ಸೂಚನೆಯಂತೆ ಅಧಿಕಾರ ನೀಡಿದವರ ಅಥವಾ ಪಡೆದವರ ಮಾಹಿತಿಯನ್ನು ಅಪ್‌ಡೇಟ್ ಮಾಡುವುದು.
- ಅಧಿಕಾರ ಪಡೆದವರ ಹೆಸರು ಮತ್ತು ಮೊಹರಿನೊಂದಿಗೆ (Seal) ಸಹಿ ಮಾಡಿದ ಪ್ರತಿಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು. ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು. ಅಧಿಕಾರ ಬದಲಾವಣೆ ಇಲ್ಲದಿದ್ದಲ್ಲಿ 'No' ಎನ್ನುವುದನ್ನು ಆಯ್ಕೆ ಮಾಡಿಕೊಳ್ಳಿ.

- 2018-19 ನೇ ಸಾಲಿನವರೆಗೆ ಶಾಲೆಯು ಮಾನ್ಯತೆ ನವೀಕರಣವಾಗಿರಬೇಕು ಹಾಗೂ ಸದರಿ ಮಾಹಿತಿಯನ್ನು ತಂತ್ರಾಂಶದಲ್ಲಿ 2018-19 ಎಂದು ಕಡ್ಡಾಯವಾಗಿ ನಮೂದಿಸಬೇಕು ಹಾಗೂ ನವೀಕರಣದ ಆದೇಶವನ್ನು ಸ್ಕ್ಯಾನ್ ಮಾಡಿ (Upload) ಅಳವಡಿಸಬೇಕು. 2018-19 ನೇ ಸಾಲಿನ ಆರ್.ಟಿ.ಇ ಶುಲ್ಕ ಮರುಪಾವತಿಗೆ ಕ್ಲೇಮ್ ಮಾಡುತ್ತಿರುವ ಶಾಲೆಯ ಮಾನ್ಯತೆ ನವೀಕರಣ ಪ್ರಮಾಣ ಪತ್ರವನ್ನು ಮಾತ್ರ ಅಳವಡಿಸಬೇಕು.
- ನಿಮ್ಮ ಶಾಲೆಯ ಬ್ಯಾಂಕ್ ಬದಲಾವಣೆಯಾದ ಸಂದರ್ಭದಲ್ಲಿ Edit option ಬಳಸಿಕೊಂಡು, ಹೊಸ ಬ್ಯಾಂಕ್ ಹೆಸರು ಮತ್ತು ಸಂಬಂದಿಸಿದ IFSC ಕೋಡ್ ನಿಖರ ಮಾಹಿತಿಯನ್ನು ಅಳವಡಿಸಿ ಬ್ಯಾಂಕ್ ಪಾಸ್ ಪುಸ್ತಕದ ಮೊದಲ ಪುಟದ ವಿವರಗಳನ್ನು ಸ್ಕ್ಯಾನ್ ಮಾಡಿ Upload ಮಾಡುವುದು.
- ಆರ್.ಟಿ.ಇ ವಿದ್ಯಾರ್ಥಿಗಳ ಮಾಹಿತಿಯ ಪರದೆಯಲ್ಲಿ SATS ತಂತ್ರಾಂಶ ಮೂಲಕ ಪಡೆದ ತರಗತಿವಾರು ವಿದ್ಯಾರ್ಥಿಯ ಹೆಸರು ಮತ್ತು ಸಂಖ್ಯೆಗಳ ವಿವರಗಳು ಡಿಫಾಲ್ಟ್ ಆಗಿ ಕಾಣಸಿಗುತ್ತದೆ. ಈ ವಿವರಗಳನ್ನು ಯಾವುದೆ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ. 2018-19 ನೇ ಸಾಲಿನಲ್ಲಿ ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ತರಗತಿವಾರು ಮಕ್ಕಳ ಹೆಸರು ಮತ್ತು ಸಂಖ್ಯೆ ಪರಿಶೀಲಿಸಿಕೊಂಡು ಖಚಿತಪಡಿಸಿಕೊಳ್ಳುವುದು. ವ್ಯತ್ಯಾಸವೇನಾದರೂ ಕಂಡುಬಂದಲ್ಲಿ, ಸೂಕ್ತ ದಾಖಲೆಗಳೊಂದಿಗೆ karnatakasatshelp@gmail.com - ಇವರನ್ನು ಇ-ಮೇಲ್ ಮೂಲಕ ಸಂಪರ್ಕಿಸಿ ಸರಿಪಡಿಸಿಕೊಳ್ಳುವುದು.
- Expenditure ವಿವರದ ಪರದೆಯಲ್ಲಿ 2017-18 ನೇ ಶೈಕ್ಷಣಿಕ ವರ್ಷದಲ್ಲಿ ಪ್ರತಿ ಮಗುವಿನಿಂದ ವಸೂಲು ಮಾಡಿದ ಶುಲ್ಕದ ಮೊತ್ತವನ್ನು ತರಗತಿವಾರು ನಮೂದಿಸಿ. pdf ನಮೂನೆಯಲ್ಲಿ ಶಾಲಾ ಆಡಿಟ್ ವರದಿಯನ್ನು ಮಾತ್ರ 1 MB ಮೀರದಂತೆ ಅಪ್‌ಲೋಡ್ ಮಾಡುವುದು. ಯಾವುದೇ ಕಾರಣಕ್ಕೂ ಸಂಸ್ಥೆಯ ಅಥವಾ ಆಡಳಿತ ಮಂಡಳಿಗೆ ಸಂಬಂದಿಸಿದ ಆಡಿಟ್ ವರದಿಯನ್ನು ಅಪ್‌ಲೋಡ್ ಮಾಡಬಾರದು.
- ಶಾಲೆಯ ಖರ್ಚುವೆಚ್ಚವನ್ನು ತಂತ್ರಾಂಶದಲ್ಲಿ ಆಡಿಟ್ ವರದಿಯಲ್ಲಿರುವಂತೆಯೇ ಸರಿಯಾಗಿ ಎಚ್ಚರಿಕೆಯಿಂದ ಅಳವಡಿಸುವುದು. ತಪ್ಪಾದ ಖರ್ಚುವೆಚ್ಚವನ್ನು ಅಳವಡಿಸಿದಲ್ಲಿ, ಸರಿಪಡಿಸಿಕೊಳ್ಳಲು ಹಾಗೂ ಯಾವುದೇ ಕಾರಣಕ್ಕೂ ಅಪೀಲ್ ಸಲ್ಲಿಸಲು ಅವಕಾಶವಿರುವುದಿಲ್ಲ ಹಾಗೂ ಮುಂದಿನ ಆಗುಹೋಗುಗಳಿಗೆ ಆಯಾ ಶಾಲೆಯವರೇ ಜವಾಬ್ದಾರಾಗುತ್ತಾರೆ.
- ಶಾಲೆಯ Expenditure ನಲ್ಲಿ ಶಿಕ್ಷಕರ ಹಾಗೂ ಶಿಕ್ಷಕೇತರ ವೇತನದಲ್ಲಿ ನೀಡುವ PF/ESI ಇನ್ನಿತರ ವೆಚ್ಚಗಳನ್ನು ಸೇರಿಸಿರಬೇಕು ಹಾಗೂ ಇವುಗಳನ್ನು ಪ್ರತ್ಯೇಕವಾಗಿ ಅಳವಡಿಸಲು ಅವಕಾಶವಿರುವುದಿಲ್ಲ.
- 1 ರಿಂದ 5 ನೇ ತರಗತಿ ಮತ್ತು 6-8ನೇ ಮತ್ತು 6 ರಿಂದ 10ನೇ ತರಗತಿಯವರೆಗೆ ಪ್ರತ್ಯೇಕ ಆಡಿಟ್ ವರದಿಗಳು ಇದ್ದಲ್ಲಿ ಒಂದೇ pdf file ನಲ್ಲಿ ಅಳವಡಿಸಿ 1 MB ಮೀರದಂತೆ ಅಪ್‌ಲೋಡ್ ಮಾಡುವುದು.
- 2017-18 ನೇ ಸಾಲಿನಲ್ಲಿ ಸರ್ಕಾರದಿಂದ ಆರ್.ಟಿ.ಇ ಅಡಿ ಮರುಪಾವತಿಸಲ್ಪಟ್ಟ ಶುಲ್ಕದ ಮೊತ್ತವನ್ನು ಸರಿಯಾಗಿ ನಮೂದಿಸುವುದು. **ಶಾಲೆಯ ಇತರೆ ವೆಚ್ಚದ ಅಡಿಯಲ್ಲಿನ** ಖರ್ಚು ವೆಚ್ಚವನ್ನು ನಮೂದಿಸಲು ಪ್ರತ್ಯೇಕವಾಗಿ ಅವಕಾಶವನ್ನು ಕಲ್ಪಿಸಲಾಗಿದೆ.
- ಆರ್.ಟಿ.ಇ ಶುಲ್ಕ ಮರುಪಾವತಿ ತಂತ್ರಾಂಶದಲ್ಲಿ ಎಲ್ಲಾ ವಿವರಗಳನ್ನು ಸರಿಯಾಗಿ ನಮೂದಿಸಿರುವ ಬಗ್ಗೆ ಖಾತರಿಪಡಿಸಿಕೊಂಡ ನಂತರ Verify button ಕ್ಲಿಕ್ಕಿಸಿ ತಪ್ಪುಗಳಿದ್ದಲ್ಲಿ ಸರಿಪಡಿಸಿಕೊಳ್ಳುವುದು.
- ಇದಾದ ನಂತರ Estimation as per school button ಕ್ಲಿಕ್ಕಿಸಿ ಶುಲ್ಕಮರುಪಾವತಿ ಲೆಕ್ಕಾಚಾರಗಳನ್ನು ಒಮ್ಮೆ ಸಂಪೂರ್ಣವಾಗಿ ಖಾತರಿಪಡಿಸಿಕೊಂಡ ನಂತರ ಅಂತಿಮವಾಗಿ final submit tab click ಮಾಡಿ ಶುಲ್ಕಮರುಪಾವತಿ ಪ್ರಸ್ತಾವನೆಯನ್ನು ಸಲ್ಲಿಸುವುದು.

2018-19ನೇ ಸಾಲಿನ ಶುಲ್ಕ ಮರುಪಾವತಿ ತಂತ್ರಾಂಶದ ಮೂಲಕ ಶಾಲಾ ಹಂತದಲ್ಲಿ ಶುಲ್ಕ ಮರುಪಾವತಿ ಬೇಡಿಕೆ ಸಲ್ಲಿಸುವ ಬಗ್ಗೆ ಸಂಬಂಧಪಟ್ಟ ಶಾಲೆಯವರಿಗೆ ಸೂಕ್ತ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯು ಆಯಾ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು(ಆಡಳಿತ) ಇವರದಾಗಿರುತ್ತದೆ. ಈ ಸಂಬಂಧ 2018-19ನೇ ಸಾಲಿನ ಶುಲ್ಕ ಮರುಪಾವತಿ ತಂತ್ರಾಂಶದಲ್ಲಿ ಶುಲ್ಕ ಮರುಪಾವತಿ ಬೇಡಿಕೆಯನ್ನು ಆನ್ ಲೈನ್ ಮೂಲಕ ಸಲ್ಲಿಸಲು ಎಲ್ಲಾ ರೀತಿಯ ಸಹಕಾರಗಳನ್ನು ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು(ಆಡಳಿತ) ರವರು ಶಾಲಾ ಆಡಳಿತ ಮಂಡಳಿಯವರಿಗೆ ನೀಡಲು ಸೂಚಿಸಲಾಗಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:

1. ಇ-ಗವರ್ನೆನ್ಸ್ ವಿಭಾಗ, ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
2. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಎಸ್.ಎ.ಟಿ.ಎಸ್ ವಿಭಾಗ, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಸಾಫ್ಟ್‌ವೇರ್ ಡೆವಲಪ್ ಮೆಂಟ್ ಸೆಂಟರ್, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ.